ಶ್ರೀ ಬಿ. ಎಸ್. ಯಡಿಯೂರಪ್ಪ (ವೆಲ್‌ನಿಂದ).— ಚರ್ಚೆ ಮಾಡಲಿಕ್ಕೆ ಇಲ್ಲಿ ಪ್ರತಿಪಕ್ಷ ಬೇಡ. ಈ ಮನೆಯಲ್ಲಿ ಮಾತನಾಡುವುದಕ್ಕೆ ಪ್ರತಿಪಕ್ಷ ಪ್ರಶ್ನೆ ಅಲ್ಲ. ರಾಜ್ಯದ ರೈತರ ಹಿತದ ಪ್ರಶ್ನೆ. ನನ್ನನ್ನು ಉದ್ಧಾರ ಮಾಡುವ ಪ್ರಶ್ನೆ ಅಲ್ಲ...

(ಗೊಂದಲ)

ಶ್ರೀ ಡಿ.ಬಿ ಚಂದ್ರೇಗೌಡ.— ನಾನು ಸಹ ಅವರು ಜಾದಾರ್ಯದಿಂದ ಅವಕಾಶ ಕೊಟ್ಟಿದ್ದಾರೆಂದ ಹೇಳಲಿಲ್ಲ. ಸಭಾಧ್ಯಕ್ಷರು ಚರ್ಚೆಗೆ ಅವಕಾಶ ಕೊಟ್ಟಿದ್ದಾರೆಂದು ಹೇಳಿದೆ. ಅದು ಮುಗಿದ ಮೇಲೆ ಉಳಿದ ವಿಚಾರವನ್ನು ಚರ್ಚೆ ಮಾಡೋಣ. ತಾವು ತಮ್ಮ ಆಸನಕ್ಕೆ ಬರಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

(ಗೊಂದಲ)

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ, ತಾವು ವಿಧಾನಸಭಾಧ್ಯಕ್ಷರಾಗಿ ಬಹಳಷ್ಟು ಉದಾರತೆಯನ್ನು ತೋರಿಸಿದ್ದೀರಿ. ಸಭಾನಾಯಕರು ಸಹ ಅವಕಾಶ ಕೊಟ್ಟಿದ್ದಾರೆ. ರೈತರ ಸ್ಥಿತಿ ಬಗ್ಗೆ ಇವರಿಗೆ ಮಾತ್ರ ಅಲ್ಲ ಬೇರೆಯವರಿಗೂ ಅನುಕಂಪ ಇದೆ. ರೈತರ ವಸತಿ ಸಮಸ್ಯೆ, ನೀರಿನ ಸಮಸ್ಯೆ, ಉದ್ಯೋಗ ಸಮಸ್ಯೆ ಹಂತ್ರ ಉಪಕರಣಗಳ ಸಮಸ್ಯೆ ಇದೆ. ಇವಕ್ಕೆಲ್ಲಾ ಗಮನ ಕೊಡದೆ ಕೇವಲ ಬರೀ ಬ್ಯಾಂಕಿನ ಸಾಲದ ಬಗ್ಗೆ ಚರ್ಚೆ ಮಾಡುತ್ತಾ ಇಷ್ಟೊಂದು ಅನಾವಶ್ಯಕವಾಗಿ ಕಾಲವನ್ನು ವಿಳಂಬ ಮಾಡುತ್ತಿದ್ದಾರೆ. ವಿರೋಧ ಪಕ್ಷದವರು ಸಹ ಮನವಿ ಮಾಡಿದ್ದಾರೆ ನಮ್ಮಲ್ಲಿನ ಬಹಳ ಸದಸ್ಯರು ಸಹ ಕಳಕಳಿಯಿಂದ ಮನವಿ ಮಾಡಿದ್ದಾರೆ. ಇಷ್ಟಾದರೂ ಇವರು ಮೊಂಡುತನವನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ನಾನು ಹೇಳುವುದೇನೆಂದರೆ ನಿಯಮದ ಪ್ರಕಾರವಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ. ಇವರು ರೈತರ ಹಿತವನ್ನು ಕಾಪಾಡುತ್ತಿಲ್ಲ, ಬದಲಿಗೆ ತೊಂದರೆ ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ...

ಅಧ್ಯಕ್ಷರು.— ಈ ಮುಂದಿನ ಪ್ರಸ್ತಾವನೆಗೆ ಹೋಗುತ್ತಿದ್ದೇನೆ.

ಗಮನ ಸೆಳೆಯುವ ಸೂಚನೆಗಳು

ಕೋಲಾರದ ಜಿಲ್ಲಾಪರಿಷತ್ತಿಗೆ ರಾಜ್ಯ ಮತ್ತು ಕೇಂದ್ರಸರ್ಕಾರ ಬಿಡುಗಡೆ ಮಾಡಿದಅನುದಾನದ ಹಣದ ದುರುಪಯೋಗ

ಶ್ರೀ ಎಂ. ವಿ. ವೆಂಕಟಪ್ಪ.— ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲಾಪರಿಷತ್ತಿಗೆ ರಾಜ್ಯ ಸರಕಾರ ಮತ್ತು ಕೇಂದ್ರ ಸಂಕಾರದಿಂದ ಬಿಡುಗಡೆ ಮಾಡಿದ ಅನುದಾನದ ಹಣವನ್ನು ದುರುಪಯೋಗ ಮಾಡಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಮಂತ್ರಿಗಳು).— ಈ ವಿಚಾರವನ್ನು ನಾಳೆಗೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು.— ಈ ವಿಷಯವನ್ನು ನಾಳೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು.— ಈಗ ಗಮನ ಸೆಳೆಯುವ ಸೂಚನೆಗಳು ಮಾನ್ಯ ಯಡಿಯೂರಪ್ಪನವರು ಅವರ ಸ್ಥಾನದಲ್ಲಿ ಇಲ್ಲದೇ ಇರುವುದರಿಂದ ಈ ಪ್ರಸ್ತಾವನೆ ಬರುವುದಿಲ್ಲ.

ನಿಯಮ ೩೩೪ರ ಮೇರೆಗೆ

ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರನ್ನು ಮತ್ತು ಸಾಲಿಗ್ರಾಮ ಪುರಸಭೆಗಳನ್ನು ಮಂಡಲ ಪಂಚಾಯತಿಯಾಗಿ ಪರಿವರ್ತಿಸಿರುವುದು,

ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ಸರಕಾರ ಒಂದೇ ವಿಷಯಕ್ಕೆ ಎರಡು ರೀತಿಯ ನಿರ್ಧಾರ ಮಾಡಿದ್ದರಿಂದಾಗಿ ಉದ್ಭವಿಸಿದ ತೊಂದರೆಯ ಕುರಿತು ಸರಕಾರದ ಗಮನ ಸೆಳೆಯುವುದೆಂದು ನನ್ನ ಉದ್ದೇಶ. ಕರ್ನಾಟಕ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿ ಕಾನೂನಿನನ್ವಯ ೧೨,೫೦೦ ಜನಸಂಖ್ಯೆತನಕ ಇರುವ ಗ್ರಾಮ ಅಥವಾ ಗ್ರಾಮ ಸಮುದಾಯ ಮಂಡಲ

ಪಂಚಾಯಿತಿ ಆಗಿ ಪರಿವರ್ತಿತವಾಗಿದೆ. ಆದರೆ ಪುರಸಭೆಗಳನ್ನು ಮುಂದಲ ಪಂಚಾಯತ್ ಆಗಿ ಪರಿವರ್ತಿಸುವಾಗ ಜನಸಂಖ್ಯೆಯ ಪರಿಮಿತಿ ೧೦,೦೦೦. ಇದರಿಂದಾಗಿ ಕೇವಲ ಕೆಲವೇ ನೂರು ಹೆಚ್ಚಿಗೆ ಜನ ಇರುವ ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು, ಸಾಲಿಗ್ರಾಮ ಪುರಸಭೆಗಳು ತೀರ ಗ್ರಾಮಾಂತರ ಪ್ರದೇಶದಲ್ಲಿದ್ದರೂ ಸಹಾ, ಪುರಸಭೆ ಎಂದೆನಿಸಿಕೊಳ್ಳುವ ಯಾವುದೇ ಲಕ್ಷಣಗಳಿಲ್ಲದಿದ್ದರೂ ಸಹಾ ಪುರಸಭೆಗಳಾಗಿಯೇ ಉಳಿದಿವೆ. ಈ ಅನ್ಯಾಯದ ವಿರುದ್ಧ ಜನ ಪ್ರತಿಭಟಿಸಿದ್ದಾರೆ. ಅನೇಕ ಸಂಘ ಸಂಸ್ಥೆಗಳು ಮನವಿ ಸಲ್ಲಿಸಿವೆ. ಜಿಲ್ಲಾಧಿಕಾರಿಗಳು ವಿಭಾಗಾಧಿಕಾರಿಗಳೂ ಸಹಾ 'ವಿಶೇಷ ಪರಿಸ್ಥಿತಿ' ಎಂದು ಪರಿಗಣಿಸಿ ಬೈಂದೂರು, ಸಾಲಿಗ್ರಾಮಗಳನ್ನು ಮುಂದಲ ಪಂಚಾಯಿತಿಗಳಾಗಿ ಪರಿವರ್ತಿಸಲು ಶಿಫಾರಸು ಮಾಡಿರುತ್ತಾರಾಗಿ ತಿಳಿದು ಬಂದಿದೆ. ತೀರ ನ್ಯಾಯವಾದ, ಅವಶ್ಯಕವಾದ ಈ ಬೇಡಿಕೆಗಳನ್ನು ಮುಂದಿನ ಪುರಸಭಾ ಚುನಾವಣೆಗೆ ಮೊದಲೇ ಈಡೇರಿಸಿ ನ್ಯಾಯ ದೊರಕಿಸಿಕೊಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ಪಶುಸಂಗೋಪನಾ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳಿಗೆ ಈ ವಿಷಯವನ್ನು ಕೊಟ್ಟಿದ್ದಾರೆ. ನನಗೆ ಈಗತಾನೆ ಕೊಟ್ಟಿದ್ದಾರೆ. ಇದರ ಬಗ್ಗೆ ನಾಳೆ ಉತ್ತರ ಕೊಡುತ್ತೇನೆ.

ಶ್ರೀ ಜಿ. ಎಸ್. ಆಚಾರ್.— ಇದು ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳಿಗೆ ಸಂಬಂಧ ಪಟ್ಟಿದ್ದುದು ಎಂದು ನನಗನ್ನಿಸುತ್ತದೆ.

ಅಧ್ಯಕ್ಷರು.— ನಾಳೆ ತೆಗೆದುಕೊಳ್ಳೋಣ; ಶ್ರೀ ಪ್ರಭಾಕರ ರಾಣೆ—ಗೈರುಹಾಜರಿ.

ಶ್ರೀ ವಿ. ಎಸ್. ಕೌಜಲಗಿ.— ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ದಿವಸ ಒಂದು ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದೆ, ಅದು ಬಂದಿಲ್ಲ.

ಅಧ್ಯಕ್ಷರು.— ನಾನು ನೋಡುತ್ತೇನೆ.

೫. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣ ನಿರ್ಣಯದ ಮೇಲಿನ ಚರ್ಚೆ

SRI M. MALLIKARJUNA KHARGE.— Sir, I beg to move that:-

"We the Members of the Karnataka Legislative Assembly assembled in this Session, beg leave to thank the Governor for the address delivered to the Members of the Legislature on 18th December 1989."

The question wos proposed

ಶ್ರೀ ಜಿ. ಎಸ್. ಶಿವನಂಜಪ್ಪ.— ಮಾನ್ಯ ಅಧ್ಯಕ್ಷರೆ. ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು ಮಂಡಿಸಿದ ವಂದನಾರ್ಪಣ ಪ್ರಸ್ತಾವನೆಯನ್ನು ನಾನು ಅನುಮೋದಿಸುತ್ತೇನೆ.

(ಪ್ರಸ್ತಾವನೆಯನ್ನು ಅನುಮೋದಿಸಲಾಯಿತು)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಸನ್ಮಾನ್ಯ ಅಧ್ಯಕ್ಷರೆ...

ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಈಗ ಪ್ಯಾನಲ್ ಆಫ್ ಛೇರ್ಮನ್ಸ್ ಆಗಿಲ್ಲ. ಆದ್ದರಿಂದ ತಾವು ಎದ್ದು ಹೋಗುವ ಹಾಗಿಲ್ಲ, ಕುಳಿತುಕೊಳ್ಳುವ ಹಾಗಿಲ್ಲ. ಆದ್ದರಿಂದ ನಾನೂ ತಮ್ಮಲ್ಲಿ ಮನವಿ ಮಾಡುತ್ತೇನೆ. ಈಗಿನ ಕಾರ್ಯಕ್ರಮವನ್ನು ಎಕ್ಸ್‌ಪೆಷನ್ ಮಾಡಿ ಒಂದು ಗಂಟೆ ಕಾಲ ಮಾನ್ಯ ಅಧ್ಯಕ್ಷರ ಸಲುವಾಗಿಯಾದರೂ ಅಡ್ಜರ್ನ್ ಮಾಡಬೇಕಾಗುತ್ತದೆ. ಇಲ್ಲದೇಹೋದರೆ ಬೇರೆ ಪ್ಯಾನಲ್ ಆಫ್ ಛೇರ್ಮನ್ಸ್ ಇಲ್ಲದೇ ಇರುವುದರಿಂದ ತಾವೊಬ್ಬರೇ ಸಾಯಂಕಾಲದವರೆಗೆ ಕಂಟಿನ್ಯೂ ಆಗಿರಬೇಕಾಗುತ್ತದೆ. ಆದ್ದರಿಂದ ಈ ಸಲಹೆಯನ್ನು ತಾವು ಒಪ್ಪಿ ಒಂದು ಗಂಟೆ ಕಾಲ ಸಭೆಯನ್ನು ಅಡ್ಜರ್ನ್ ಮಾಡಬೇಕೆಂದು ಹೇಳುತ್ತೇನೆ.